ಕಹಿ ಘಟನೆಗಳು.

ಹದಿನೆಂಟಿಪ್ಪತ್ತು ವರ್ಷ ಹಳೆಯವು. ಸ್ವಾತಿಗೆ ಮದುವೆಯಾಗಿ, ಅವಳಿಗೊಬ್ಬ ಮಗಳು ಹುಟ್ಟಿ, ಅರೆ ಆಯುಸ್ಸಲ್ಲಿ ಇನ್ನಿಲ್ಲವಾದ ಮಗಳೇ ಈ ರೂಪದಲ್ಲಿ ಮರಳಿ ಹುಟ್ಟಿದ್ದಾಳೆಂದು ಅಪ್ಪ, ಅಮ್ಮ ಮಾತ್ರವಲ್ಲ, ಸ್ವಾತಿಯೂ ನಂಬತೊಡಗಿ, ಅರಕೆಯಲ್ಲೂ ಸಮಾಧಾನ. ದುಃಖದಲ್ಲೂ ಸುಖ. ನೋವಿನಲ್ಲೂ ಸಾಂತ್ವನ ಅಮ್ಮ, ಮಗಳ ಫೋನ್ ಸಂಭಾಷಣೆ ಅರ್ಧಕ್ಕೆ ತುಂಡುಗಡಿದಿತ್ತು. ಬಹುಶಃ ಅಮ್ಮನೂ ತನ್ನಂತೆ ಹಳೆಯ ನೆನಪಲ್ಲಿ ಕಳೆದು ಹೋಗಿರಬಹುದಾದ ಸಾಧ್ಯತೆಯನ್ನು ಊಹಿಸಿಕೊಂಡಿದ್ದಳು ಸ್ವಾತಿ. ಅಮ್ಮನ ಮನೋಸ್ಥಿತಿಯನ್ನು ಮತ್ತೆ ಮೊದಲಿನ ಹದಕ್ಕೆ ತರಬೇಕೆಂದು ಅವಳು ಮಾತನ್ನು ಮೊದಲಿನ ಲಘು ಧಾಟಿಗೆ ಎಳೆತಂದಳು.

'ಅದೇನೋ ಜೋಕು ಅಂತಿದ್ಯಲ್ಲ, ಹೇಳಮ್ಮಾ, ನಾನೂ ಸ್ವಲ್ಪ ನಗ್ತೀನಿ...'

'ಎಲ್ರಿಗೂ ಗೊತ್ತಿರೋದೇ ಮಾರಾಯ್ತೀ...'

'ಪರ್ವಾಗಿಲ್ಲ ಹೇಳು...'

'ಹೆಂಡತಿ ಅಡುಗೆ ಮನೇಲಿ ಕೆಲಸ ಮಾಡ್ತಿದ್ಲು. ಗಂಡ ಹಾಲ್‌ನಲ್ಲಿ ಪೇಪರ್ ಓದ್ತಿದ್ದ. ಇವತ್ತು ಏನು ತಿಂಡಿ ಮಾಡ್ತಿದೀಯೇ? ಕೂತಲ್ಲಿಂದಲೇ ಕೇಳಿದ. ಉತ್ತರ ಇಲ್ಲ. ಮತ್ತೂ ಜೋರಾಗಿ ಕೇಳಿದ. ಊಹೂಂ. ಒಂದು ಪ್ರಶ್ನೆಗೆ ಉತ್ತರ ಕೊಡದಷ್ಟು ಸೊಕ್ಕು ಮಾಡ್ತಾಳಾ ಅಂದ್ಕೊಂಡು ಅಡುಗೆ ಮನೆ ಬಾಗಿಲಿಗೆ ಹೋಗಿ ಕಿರುಚಿದ, 'ಏನು ತಿಂಡಿ ಮಾಡ್ತಿದೀಯೇ? ಕೇಳಿದ್ದನ್ನೇ ಎಷ್ಟು ಸಲ ಕೇಳ್ಬೇಕು?'

'ನಾನು ಪ್ರತಿ ಸಲಾನೂ ಉತ್ತರ ಕೊಟ್ಟಿದೀನಿ. ನಿಮಗೆ ಕಿವಿ ಎಲ್ಲೋ ದೂರ ಆಗಿದೆ ಅಂತ ಹೇಳಿದ್ಲಂತೆ ಹೆಂಡತಿ'.

'ನಾನೂ ಈ ಜೋಕು ಎಲ್ಲೋ ಓದಿದೀನಿ ಕಣೇ...'

'ನಿಮ್ಮಪ್ಪಾನೂ ಮೊದಲಿಗೆ ಹೀಗೇ ಆಡ್ತಿದ್ರು. ನಾನು ಸರಿಯಾಗಿ ಕೇಳಿಸ್ಕೊತಿಲ್ಲ, ಮಾತಾಡ್ತಿಲ್ಲ ಅಂತ ಪುಕಾರು'.

'ಹೂಂ'

'ಡಾಕ್ಟ್ರ ಹತ್ರ ಹೋದ್ಮೇಲೇ ಗೊತ್ತಾಗಿದ್ದು, ನಿಮ್ಮಪ್ಪಂಗೆ ಕಿವಿ ಸರಿಯಾಗಿ ಕೇಳಿಸ್ತಿಲ್ಲ ಅಂತ. ಎಲ್ಲಾ ಪುರಾಣ ನಿಂಗೆ ಹೇಳಿದೀನಲ್ಲ. ಹೇಳಿದ್ದನ್ನೇ ಹೇಳ್ತಿರ್ತಾಳೆ ಅಂತ ಬೇಜಾರು ಮಾಡ್ಕಂಬೇಡ'

'ಹಿಯರಿಂಗ್ ಏಡ್ ಹಾಕಿಸ್ಕೊಂಡ್ರೆ ಸರಿಯಾಗಿ ಕೇಳ್ಸುತ್ತೆ ಅಂತ ಅದನ್ನ ಹಾಕಿಸ್ಕೊಂಡಿದ್ದು ಬರೀ ದಂಡಕ್ಕೆ ಅಂತಾಯ್ತಲ್ಲ ಅಮ್ಮಾ, ಅಭ್ಯಾಸ ಮಾಡ್ಕೊಳ್ಳಿ ಅಂತ ಒತ್ತಾಯ ಮಾಡ್ಬೇಕಿತ್ತು ನೀನು...'

'ಎಲ್ಲಾ ಹೇಳಿದ್ದಾಯ್ತು, ಕೇಳಿದ್ದಾಯ್ತು. ಅದನ್ನ ಹಾಕ್ಕೊಂಡ್ರೆ ಮೈಕಲ್ಲಿ ಕೇಳಿದ ಹಾಗಾಗುತ್ತೆ, ಬೇಡ್ವೇ ಬೇಡ ಅಂತ ರಗಳೆ ಮಾಡಿದ್ರು...'

'ಉಪಯೋಗಿಸ್ತಿದ್ರೆ ತನ್ನಷ್ಟಕ್ಕೆ ಅಭ್ಯಾಸ ಆಗ್ತಿತ್ತು. ವಾಲ್ಯೂಮ್ ಹೆಚ್ಚು ಕಮ್ಮಿ ಮಾಡ್ಕೋಬಹುದಂತಲ್ಲ?'

'ನಿಮ್ಮಪ್ಪನ ಬುದ್ಧಿ ನಿಂಗೆ ಗೊತ್ತಿಲ್ವಾ? ತಮ್ಮ ಮನಸ್ಸಿಗೆ ಬಂದಿದ್ದೇ ಮಾಡೋದು. ಅದನ್ನ ಮೂಲೆಗೆ ಹಾಕಿಟ್ಟಿದಾರೆ'.

'ಮತ್ತೆ? ಸಾಮಾನು, ತರಕಾರಿ ಅಂತ ರಸ್ತೆಗೆ ಹೋಗ್ತಾರಲ್ವೇನೇ? ಆಗ್ಲಾದ್ರೂ ಹಾಕ್ಕೋಬೇಕಪ್ಪಾ...'

'ಎಡವಿ ಬಿದ್ರೆ ಅಂಗಡಿ ಇದಾವಲ್ಲ, ನಾನೇ ಹೋಗಿ ಬೇಕಾದ್ದು ತರ್ತೀನಿ. ಈಗ ಇವರಾಯ್ತು, ಮನೆ ಆಯ್ತು...'

'ಛೇ, ಹಾಗಿರೋದು ತಪ್ಪು ಅಮ್ಮಾ. ನಾನು ಹೇಳ್ತೀನಿ ಅಪ್ಪಂಗೆ. ನೀನೇನು ಆರಾಮಾಗಿದೀಯಾ? ಶುಗರ್ರು, ಬಿಪಿ ಅಂತ ಒದ್ದಾಡ್ತಿದ್ದಿ. ನಂಗೆ ನಿಮ್ಮನ್ನ ನೆನೆಸ್ಕೊಂಡ್ರೆ ಹೆದರಿಕೆ ಆಗುತ್ತೆ...'

'ಹೆದರೋವಂತಾದ್ದೇನಿಲ್ಲ. ಹೇಗೋ ನಡೀತಿದೆ. ತೀರಾ ಬೇಕೂಂತಾದ್ರೆ ಮನೆಗೇ ಬೇಕಾದ್ದು ತರಿಸ್ಕೋಬಹುದು'.

'ಮೊದಲು ಅದನ್ನು ಮಾಡಿ. ನೀನು ರೋಡಿಗೆ ಹೋಗೋದು ಕಮ್ಮಿ ಮಾಡು. ಅಪ್ಪಂಗೆ ಫೋನ್ ಕೊಡು...'

'ಸ್ನಾನಕ್ಕೆ ಹೋಗಿದಾರೆ ಕಣೇ. ಬಂದ ಮೇಲೆ ಹೇಳ್ತೀನಿ. ನಿನ್ನತ್ರ ಮಾತಾಡೋಕಾದ್ರೂ ಮಿಷನ್ ಕಿವಿಗೆ ಹಾಕ್ಕೋತಾರಾ ನೋಡೋಣ...'

'ಆಯ್ತಮ್ಮಾ, ಇಡ್ತೀನಿ ಫೋನು'.

***

ರಾತ್ರಿ ಸರಿಯಾಗಿ ನಿದ್ದೆ ಬರದಿದ್ದರೆ ಎರಡೋ, ಮೂರೋ ಸಲ ಬಾತ್‌ರೂಮಿಗೆ ಎಡತಾಕುವುದು ಜಾನಕಮ್ಮನ ಅಭ್ಯಾಸ. ಗಂಡನಿಗೆ ಎಚ್ಚರವಾಗಬಾರದೆಂದು ಬೆಕ್ಕಿನ ಹೆಜ್ಜೆ ಇಟ್ಟು ನಡೆಯುವುದು, ಸದ್ದಾಗದಂತೆ ಬಚ್ಚಲಿನ ಬಾಗಿಲು ಮುಚ್ಚಿಕೊಳ್ಳುವುದು ಮೊದಲಿಂದ ಅವರಿಗೆ ರೂಢಿ. ಲೈಟ್ ಹಾಕಿಕೊಳ್ಳುತ್ತಿರಲಿಲ್ಲ ಜಾನಕಮ್ಮ. ಅದರ ಅವಶ್ಯಕತೆ ಇರಲಿಲ್ಲ. ಬೀದಿ ದೀಪದ ಬೆಳಕು ಮನೆಯೊಳಗೆ ತಡವರಿಸದೆ ಓಡಾಡುವಷ್ಟು ಮಂದ ಪ್ರಕಾಶ ಚೆಲ್ಲುತ್ತಿರುತ್ತಿತ್ತು. ಇದೀಗ, ಗಂಡನಿಗೆ ಕಿವಿ ಮಂದವಾದ ಮೇಲೆ ಇಷ್ಟು ಎಚ್ಚರಿಕೆ ವಹಿಸಬೇಕಾದ ಅವಶ್ಯಕತೆಯೇನಿರುತ್ತಿರಲಿಲ್ಲ. ಆದರೂ ಅಭ್ಯಾಸಬಲ. ಸದ್ದಾಗದಂತೆ ನಡೆದಾಡುತ್ತಿದ್ದರು ಜಾನಕಮ್ಮ. ಹಳೆಗಾಲದ ಮನೆ. ಕೋಣೆಗೆ ಹೊಂದಿಕೊಂಡಂತೆ ಶೌಚಗೃಹ ಇಲ್ಲ. ಅಡುಗೆಮನೆಯ ಬದಿಯಲ್ಲಿನ ಪ್ಯಾಸೇಜಿನ ಮುಖಾಂತರ ಹಾದು ತಲುಪಬೇಕು ಬಚ್ಚಲನ್ನು. ಅವತ್ತು ಮಧ್ಯರಾತ್ರಿ ಸುಮಾರಿಗೆ ಮೂತ್ರಶಂಕೆ ತೀರಿಸಿ ಬರಲು ಎದ್ದರು ಜಾನಕಮ್ಮ. ಪ್ಯಾಸೇಜಿನ ಆ ಕಡೆ, ಈ ಕಡೆಯ ಗೋಡೆಯನ್ನು ಕೈಯಿಂದ ತಡವುತ್ತಾ ಬಚ್ಚಲನ್ನು ಹೊಕ್ಕರು. ಅದೇನಾಯ್ತೋ, ಬಿ.ಪಿ. ಹೆಚ್ಚು ಕಡಿಮೆ ಆಯ್ತೋ ಅಥವಾ ಅವತ್ತು ಬಿ.ಪಿ. ಮಾತ್ರೆ ನುಂಗಲು ಮರೆತೇ ಹೋಗಿತ್ತೋ, ಒಂದೊಂದು ಸಲ ಕೆಲಸದ ಗಡಿಬಿಡಿಯಲ್ಲಿ ಅಂತಹ ಪ್ರಮಾದ ಆಗಿ ಬಿಡುತ್ತಿತ್ತು, ಗಿರ್ರನೆ ತಲೆ ತಿರುಗಿದಂತಾಗಿ, ಕಣ್ಣು ಕತ್ತಲಿಟ್ಟು, ಧೊಪ್ಪನೆ ಕುಕ್ಕರಿಸಿದರು ಜಾನಕಮ್ಮ.

'ಅಯ್ಯೋ...' ಎನ್ನುವ ಚೀತ್ಕಾರ ಗಂಟಲು ದಾಟಿ ಹೊರ ಬಂದಿರಬಹುದು, ಬರದಿರಲೂ ಬಹುದು. ಮೈಮೇಲಿನ ಅರಿವು ತಪ್ಪಿಹೋಗಿತ್ತು. ಮತ್ತೆಷ್ಟು ಹೊತ್ತಿಗೋ ಎಚ್ಚರ ಬಂದಾಗ ನಡೆದಿದ್ದೇನೆಂಬುದರ ಅರಿವು ಚಿತ್ತದಲ್ಲಿ ಮರುಕಳಿಸಿ ಮೇಲೇಳಲು ಹೋದರೆ ಏಳಲು ಸಾಧ್ಯವಾಗುತ್ತಿಲ್ಲ. ಕುಕ್ಕರಿಸಿದ ಹಿಂಭಾಗದಲ್ಲಿ ಅಸಾಧ್ಯವಾದ ನೋವು.

'ರೀ.., ರೀ.., ಬನ್ರೀ...' ಗಂಡನನ್ನು ಕರೆದೇ ಕರೆದರು ಜಾನಕಮ್ಮ. ಸೊರಗಿದ ಗಂಟಲಿನ ಆರ್ತನಾದ ಕಿವುಡುಗಿವಿಗೆ ತಲುಪೀತಾದರೂ ಹೇಗೆ? ಅಸಹಾಯಕರಾಗಿ ಬಚ್ಚಲ ಗೋಡೆಗೊರಗಿ ಕಣ್ಮುಚ್ಚಿಕೊಂಡು ನರಳಿದರು ಜಾನಕಮ್ಮ.

***

ಯಥಾ ಸಾವಕಾಶವಾಗಿ ಬೆಳಗಿನ ಆರಕ್ಕೆ ವಾಡಿಕೆಯಂತೆ ಎದ್ದರು ಜಾನಕಮ್ಮನ ಗಂಡ. ಅಡುಗೆಮನೆಯಿಂದ ಬರಬೇಕಾಗಿದ್ದ ಕಾಫಿಯ ಘಮಲನ್ನು ಆಸ್ವಾದಿಸಲೆಂಬಂತೆ ನಿಡಿಯುಸಿರೆಳೆದು ಕೊಂಡರು. ಅಂತದೇನೂ ಮೂಗಿಗೆ ತಾಗದೆ ದಿನಚರಿಯಲ್ಲಿ ಏನೋ ಭಂಗವಾದ ಅನುಭವ. ಮೈ ಮುರಿಯುತ್ತಾ ಎದ್ದು ಮುಖಮಾರ್ಜನಕ್ಕೆ ಬಚ್ಚಲಿಗೆ ಹೋದವರು ಮಡದಿಯ ಸ್ಥಿತಿ ಕಂಡು ಅಕ್ಷರಶಃ ನಡುಗಿಬಿಟ್ಟರು.

'ಏನಾಯ್ತೇ? ಏನಾಯ್ತೇ? ಜಾರಿ ಬಿದ್ಯಾ?' ಮಡದಿಯ ಉತ್ತರ ಕಿವಿಗೆ ಕೇಳಿಸದಿದ್ದರೂ ಕಣ್ಣಿಂದ ದಳದಳ ಇಳಿಯುತ್ತಿದ್ದ ನೀರು ಜಾನಕಮ್ಮನ ಪರಿಸ್ಥಿತಿಯನ್ನು ಅವರಿಗೆ ಮನವರಿಕೆ ಮಾಡಿಸಿತು. ಕೈ ಹಿಡಿದು ಎತ್ತಲು ಹೋದರೆ ಅವರೊಬ್ಬರಿಂದ ಸಾಧ್ಯವಾಗಲಿಲ್ಲ. ನೆರೆಮನೆಯವರನ್ನು ಕರೆದು, ಅವರ ಸಹಾಯದಿಂದ ಜಾನಕಮ್ಮನನ್ನು ನಡುಮನೆಯವರೆಗೆ ಎತ್ತಿ ತಂದು ಮಲಗಿಸಿ, ಆಂಬುಲೆನ್ಸ್‌ಗೆ ಫೋನ್ ಮಾಡಿ, ಹಿಂದಿನ ದಿನ ಬಿಡುಬೀಸಾಗಿ ಓಡಾಡಿಕೊಂಡು ಮನೆಯ ಪಾರುಪತ್ಯ ಮಾಡುತ್ತಿದ್ದ ಜಾನಕಮ್ಮ ಇವತ್ತು ಸ್ಟ್ರೆಚರಿನ ಮೇಲೆ ಮಲಗಿ ಆಸ್ಪತ್ರೆಗೆ ರವಾನಿಸಲ್ಪಟ್ಟರು.

***

ಹಲೋ, ಮಗಳೇ, ಏನ್ಮಾಡ್ತಿದ್ದಿ? ಎಲ್ಲಾ ಆರಾಮಾ?'

'ಅರೇ, ಅಪ್ಪಾ!. ನೀವು ಫೋನ್ ಮಾಡ್ತಿದೀರಿ ಅಂದ್ರೆ ನಂಬೋಕೇ ಆಗ್ತಿಲ್ಲ ನಂಗೆ'.

'ಏನ್ಮಾಡ್ತಿದಾಳೆ ಮೊಮ್ಮಗಳು?'

'ಪರೀಕ್ಷೆ ಹತ್ರ ಬಂತಲ್ಲ, ಯುದ್ಧ ಕಾಲೇ ಶಸ್ತ್ರಾಭ್ಯಾಸ ಅಂತ ಈಗ ಬಿಸಿ ಮುಟ್ತಿದೆ. ಓದು ನಡೀತಿದೆ'.

'ಪರೀಕ್ಷೆ ಹತ್ರ ಬಂದಾಗ್ಲೇ ಬಿಸಿ ಮುಟ್ಟೋದು ಮಗಳೇ. ಕೆಲವರಿಗೆ ಪರೀಕ್ಷೆ ಬಂದ ಮೇಲೆ...'

'ಏನೋ ಒಂದು. ಮತ್ತೆ? ನೀವೆಲ್ಲಾ ಹೇಗಿದೀರಿ ಅಪ್ಪಾ? ಕಿವಿಗೆ ಮಿಷನ್ ಹಾಕ್ಕೊಳ್ಳೋದು ಅಭ್ಯಾಸ ಮಾಡ್ಕೋತಿದೀರಿ ಅಂತಾಯ್ತು'.

'ಅಭ್ಯಾಸ ಮಾಡ್ಕೊಳ್ಳೋದು ಅನಿವಾರ್ಯ ಅಂತಾದ್ರೆ ಅಭ್ಯಾಸ ಮಾಡ್ಕೊಳ್ಳೇಬೇಕಲ್ಲ?'

'ಅಮ್ಮ ಸುಳ್ಳೇ ನಿಮ್ಮ ಮೇಲೆ ದೂರು ಹೇಳ್ತಿದ್ಲು. ನೀವು ಹಾಗಲ್ಲ ಅಂತ ನಂಗೊತ್ತಿಲ್ವಾ? ಏನ್ಮಾಡ್ತಿದಾಳೆ ಅಮ್ಮ?'

'ಮಲಗಿದಾಳೆ ಕಣೇ'

'ಏನು? ಇಷ್ಟು ಹೊತ್ನಲ್ಲಾ? ಮಧ್ಯಾಹ್ನ ಆಗ್ತಾ ಬಂದಿದೆಯಲ್ಲ ಅಪ್ಪಾ? ಹುಷಾರಾಗಿದಾಳೆ ತಾನೇ?'

